ಶುರುವಾಯಿತು. ನೆಲದಲ್ಲಿ ಅರಳಿದ ಬಣ್ಣಬಣ್ಣದ ಸಣ್ಣಸಣ್ಣ ಹೂವುಗಳು ಬಹಳವಾಗಿ ಆಕರ್ಷಿಸಿದವು. ನಾವು ಏರುವ ಎತ್ತರ ಬದಲಾದಂತೆ ಇಲ್ಲಿ ಕಾಣುವ ಸಸ್ಯಗಳು, ಸಿಗುವ ಹೂಗಳ ಸ್ವರೂಪವೂ ಬದಲಾಗುತ್ತಿತ್ತು. ಎಷ್ಟೊಂದು ಚೆಂದದ ಪುಷ್ಪಗಳ ಇಲ್ಲಿ ತಂದು ನೆಟ್ಟವರು ಯಾರು? ಎಂದು ಗುನುಗುತ್ತಾ ಪಟ ತೆಗೆಯುತ್ತಿದ್ದೆ. ನೆಲಕ್ಕೆ ಅಂಟಿ ಬೆಳೆವ ಮೋಟು ಗಿಡದಲ್ಲಿ ಅರಳುವ ಈ ಹೂಗಳ ಚಿತ್ರ ತೆಗೆಯಲು ಸಾಕಷ್ಟು ಕಸರತ್ತು ಮಾಡಬೇಕಿತ್ತು. ಮೈಕೈ ಕೆಸರಾಗಿ ಸಮಯವೂ ಹಿಡಿಯುತ್ತಿತ್ತು. ಬಹಳ ಸಲ ಎಲ್ಲರೂ ನನ್ನ ಬಿಟ್ಟು ಹೊರಟು ಹೋಗಿ ನಾನೇ ಕೊನೆಯವನಾಗಿ ನಡೆಯುತ್ತಿದ್ದೆ.

ದಾರಿಯಲ್ಲಿ ಮರಗಳ ಮೇಲೆ ಅರಳಿದ ಕೆಂಪು ಹೂಗಳನ್ನು ಕಂಡೆ. ಬಣ್ಣದಲ್ಲಿ ಇವು ತುಂಬಾ ಆಕರ್ಷಕವಾಗಿದ್ದವು. ಬುರಾಂಶ್ ಎಂಬ ಹೆಸರಿನ ಈ ಹೂವಿನಿಂದ ಇಲ್ಲಿನ ಜನ ಷರಬತ್ತು ತಯಾರಿಸುತ್ತಾರೆ. ಕುಡಿಯಲು ಕೊಟ್ಟಿದ್ದರು – ಒಂಥರ ಹಿತವಾಗಿ, ಪರಿಮಳಭರಿತವಾಗೇ ಇತ್ತು. ನಮ್ಮ ಕಡೆ ಮನೆಗೆ ಬಂದವರಿಗೆ ನಿಂಬೆಪಾನಕ ಕೊಡುವಂತೆ ಇಲ್ಲಿ ಸ್ವಾಗತ ಪಾನೀಯವಾಗಿ ಇದನ್ನು ನೀಡುತ್ತಾರೆ. ಹಿಮಾಲಯದ ತಪ್ಪಲಲ್ಲಿ ಈ ಪುಷ್ಪದ ಚಿತ್ರ ತೆಗೆಯುವುದು ಕೊಂಚ ಕಷ್ಟವಿತ್ತು. ಆಳದ ಪ್ರಪಾತಗಳಲ್ಲಿ ಬೆಳೆದಿದ್ದ ಇದರ ಪಟ ತೆಗೆಯಲು ಹೋದರೆ ಕಾಲು ಜಾರಿ ಬೀಳುವ ಅಪಾಯವಿತ್ತು. ಮಂಜಿನ ಕೆಳಗೆ ಗಟ್ಟಿ ಭೂಮಿಯಿದೆ ಎಂದು ಭಾವಿಸಿ ಹೆಜ್ಜೆ ಊರುವುದು ಕೆಲವೊಮ್ಮೆ ಮೂರ್ಖತನವೂ ಆಗಬಲ್ಲದು. ಹೆಚ್ಚುಕಮ್ಮಿಯಾದರೆ ಹೂವಿನ ಚಿತ್ರದ ಬದಲಿಗೆ ನನ್ನ ಚಿತ್ರವೇ ನಮ್ಮನೆ ಗೋಡೆಯಲ್ಲಿ ಹಾರದ ಜೊತೆ ತೂಗುಬೀಳುವುದು ಗ್ಯಾರಂಟಿ ಎಂದೆನಿಸಿ ಆ ವಹಿವಾಟನ್ನೇ ಬಿಟ್ಟೆ!



ಒಂದು ದಿನ ಬೆಳಗ್ಗೆ ಜೊತೆಗಿದ್ದ ಪರ್ವತರೋಹಿಯೊಬ್ಬರು ಪರ್ವತದ ತುದಿ ತೋರಿಸಿ, 'ಅದೋ ನೋಡಿ, ಅಲ್ಲೊಂದು ನಾಯಿ ಓಡುತ್ತಿದೆ' ಎಂದರು. ಜನರೇ ಇಲ್ಲದ ಈ ಕಾಡ ದಾರಿಯಲ್ಲಿ ನಾಯಿ ಎಲ್ಲಿಂದ ಬರಲು ಸಾಧ್ಯ? ಯಾವುದಕ್ಕೂ ಇರಲಿ ಎಂದು ನನ್ನ ವಿಡಿಯೋಕಾಂನಲ್ಲಿ ರೆಕಾರ್ಡಿಂಗ್ ಮಾಡಿಕೊಂಡೆ. ನಮಗೆ ಮಾರ್ಗದರ್ಶನ ಮಾಡುತ್ತಿದ್ದ ಬಹದ್ದೂರ್ ತುಂಬಾ ಮುಂದಿದ್ದ. ಅವನಿಗೆ ನಾವು ಕಂಡ ನಾಯಿಯ ವಿಚಾರ ನಂತರ ಹೇಳಿದಾಗ ಆತ, 'ಇದ್ದರೂ ಇರಬಹುದು. ಈ ಬೆಟ್ಟದಲ್ಲಿ ಗುಜ್ಜರ್ ಸಮುದಾಯದವರು ಕುರಿ ಮೇಕೆ ಮೇಯಿಸುತ್ತಾರೆ. ಅವರು ಸಾಕಿದ ನಾಯಿಯೇ ಅದಿರಬಹುದು' ಎಂದ.

ಸಂಜೆ ಕ್ಯಾಂಪು ತಲುಪಿದಾಗ ನಾವು ಕಂಡ ನಾಯಿಯ ಬಗ್ಗೆ ಅಲ್ಲಿದ್ದ ಡೇರೆಯ ಮುಖ್ಯಸ್ಥನ ಬಳಿ ಲೋಕಾರೂಢಿ ಮಾತಾಡುತ್ತಾ ಪ್ರಸ್ತಾಪಿಸಿದೆ. ಆತ ಹಲವು ವರ್ಷಗಳಿಂದ ಈ ಚಾರಣದ ಒಂದು ಡೇರೆಯ ಜವಾಬ್ದಾರಿಯನ್ನು ಹೊರುತ್ತಿದ್ದವನು. ಅಸಲಿಗೆ ಆತ ದೆಹಲಿಯಲ್ಲಿ ಬ್ಯಾಂಕೊಂದರ ಮ್ಯಾನೇಜರ್. ಹಿಮಾಲಯದ ಪರಿಸರದಲ್ಲಿದ್ದು ಮನಸ್ಸಿಗೆ ಶಾಂತಿ ನೆಮ್ಮದಿ ಪಡೆಯಲು ಇಲ್ಲಿಗೆ ಬಂದು, ತಿಂಗಳಿದ್ದು ಯಾತ್ರಿಗಳ ಉಚಿತ ಸೇವೆ ಮಾಡುತ್ತಾನೆ. ಪಕ್ಷಿ ಪ್ರಾಣಿಗಳ ಬಗ್ಗೆ ವಿಶೇಷ ಕುತೂಹಲವಿದ್ದ ಆತ ನಾನು ರೆಕಾರ್ಡಿಂಗ್ ಮಾಡಿಕೊಂಡಿದ್ದ ನಾಯಿಯನ್ನು ನೋಡಿದವನೇ ಹೌಹಾರಿ ಹೋದ.

'ಜಸ್ಟ್ ಮಿಸ್' ಎಂದು ಕೈ ಹಿಚುಕಿಕೊಂಡ. ಯಃಕಶ್ಚಿತ್ ಶ್ವಾನ ನೋಡಿ ಬದಲಾದ ಅವನ ಮುಖಚರ್ಯೆ ನಮಗೂ ವಿಚಿತ್ರ ಎನಿಸಿತು. ನಾ ತೆಗೆದ ಚಿತ್ರವೂ ದೂರದಿಂದ ಚಿತ್ರೀಕರಿಸಿದ್ದ ಕಾರಣ ಅಷ್ಟೊಂದು ಸ್ಪಷ್ಟವಾಗಿಯೂ ಮೂಡಿರಲಿಲ್ಲ. ಅವನ ಬಳಿ ಭಾರಿ ಕ್ಯಾಮೆರಾಗಳ ಭಂಡಾರವೇ ಇರುವುದನ್ನೂ ತೋರಿಸಿದ. ಏನೂ ಹೇಳದೆ ಬರೀ ಆಘಾತ ವ್ಯಕ್ತಪಡಿಸಿ 'ನಿಮ್ಮ ಅದೃಷ್ಟ' ಎಂದ. ಈ ಅಸ್ಪಷ್ಟದವನು ನೆಟ್ಟಗೆ